## ಕುಂದು ಕೊರತೆ



### ತ್ಯಾಜ್ಯ ವಿಲೇವಾರಿ ಮಾಡಿಸಿ

ಚಾಮರಾಜ ಮೊಹಲ್ಲಾದ 1ನೇ ಅಡ್ಡರಸ್ತೆಯಲ್ಲಿ ಸ್ಥಳೀಯರು ಸುರಿದಿರುವ ತ್ಯಾಜ್ಯದಿಂದ ಅಶುಚಿತ್ವ ಉಂಟಾಗಿದೆ.

ರಸ್ತೆಯಲ್ಲಿ ಕಸದ ತೊಟ್ಟಿಯೂ ಇಲ್ಲದಿರುವುದರಿಂದ ದಿನೇ-ದಿನೇ ಸೊಳ್ಳೆ ಕಾಟ ಹೆಚ್ಚಾಗುತ್ತಿದೆ. ಸ್ಥಳೀಯ ನಿವಾಸಿಗಳಿಗೆ ಸಾಂಕ್ರಾಮಿಕ ರೋಗ ಹರಡುವ ಭೀತಿ ಉಂಟುಮಾಡುತ್ತಿದೆ. ಶನಿವಾರ ಮಳೆ ಸುರಿದಿದ್ದರಿಂದ, ತ್ಯಾಜ್ಯ ಇನ್ನಷ್ಟು ಕೊಳೆಯುತ್ತಿದೆ.

ಪೌರಕಾರ್ಮಿಕರ ಗಮನಕ್ಕೆ ಬಂದಿದ್ದರೂ, ಯಾರೂ ಸ್ವಚ್ಛತೆಗೆ ಮುಂದಾಗುತ್ತಿಲ್ಲ. ಆದ್ದರಿಂದ ಪಾಲಿಕೆ ಅಧಿಕಾರಿಗಳು ಪೌರಕಾರ್ಮಿಕರಿಗೆ ಸೂಚಿಸಿ, ತ್ಯಾಜ್ಯ ತೆರವುಗೊಳಿಸಬೇಕು.

**ಕೆ.ಬಿ.ಪೃಥ್ವಿರಾಜ್,** ಸ್ಥಳೀಯ ನಿವಾಸಿ



### ಕಸ ವಿಲೇವಾರಿಯಾಗಲಿ

ವಾರ್ಡ್ ಸಂಖ್ಯೆ 36ರ ಎಂ.ಎನ್.ಜೋಯಿಸ್ ರಸ್ತೆಯಲ್ಲಿ ಸ್ಥಳೀಯರು ಸುರಿದಿರುವ ತ್ಯಾಜ್ಯದಿಂದ ಅಶುಚಿತ್ವ ತಾಂಡವವಾಡುತ್ತಿದೆ.

ಈಚೆಗೆ ಮಳೆ ಬಂದಾಗ ತ್ಯಾಜ್ಯದಿಂದ ಹೊರಬರುತ್ತಿದ್ದ ಗಲೀಜು ನೀರು ರಸ್ತೆ ಮಧ್ಯದಲ್ಲೇ ಹರಿಯುತ್ತಿತ್ತು. ಇಲ್ಲಿ ಕಸದ ತೊಟ್ಟಿಯನ್ನು ಅಳವಡಿಸದೇ ಇರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.

**ಶ್ರೀನಿವಾಸ,** ಚಾಮರಾಜಮೊಹಲ್ಲಾ

## ಮೆಟ್ರೊ ಪತ್ರ

### ರಸ್ತೆ ಸೂಚನಾ ಫಲಕ ಅಳವಡಿಸಿ

ನಗರದ ಸರಸ್ವತಿಪುರಂ 14ನೇ ಮುಖ್ಯರಸ್ತೆಯಲ್ಲಿ ನೋಪಾರ್ಕಿಂಗ್ ಇದ್ದರೂ ಇಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು ರಸ್ತೆಗೆ ಹೊಂದಿಕೊಂಡಂತೆ ಬೈಕ್ ನಿಲ್ಲಿಸುತ್ತಾರೆ.

ಇದರಿಂದ ಶಾಲಾ, ಕಾಲೇಜು ವಿದ್ಯಾರ್ಥಿಗಳ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ.

ಇಲ್ಲಿ ನೋಪಾರ್ಕಿಂಗ್ ಫಲಕ ಅಳವಡಿಸುವಂತೆ ಪಾಲಿಕೆಗೆ ಸಾಕಷ್ಟು ಬಾರಿ ಮನವಿ ಮಾಡಿದ್ದೇವೆ. ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ.

ಅಲ್ಲದೇ, ಈ ರಸ್ತೆಯಲ್ಲಿ ರಾತ್ರಿ ವೇಳೆ ಇಲ್ಲಿನ ಅನೇಕ ಬೀದಿ ದೀಪಗಳು ಉರಿಯುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.

**ಬಿ.ಎಸ್.ರವಿಕುಮಾರ್,** ಸರಸ್ವತಿಪುರಂ

### ಅವಘಡಕ್ಕೂ ಮುನ್ನ ಎಚ್ಚರವಹಿಸಿ

ನಗರದ ರಾಮಸ್ವಾಮಿ ವೃತ್ತದಲ್ಲಿರುವ ವಿದ್ಯುತ್ ಕಂಬದ ವೈರುಗಳು ಹಾಗೂ ಕೇಬಲ್ ವೈರುಗಳು ಬಿಸಿಲಿಗೆ ಜೋತು ಬೀಳುತ್ತಿವೆ.

ಅಲ್ಲದೇ ಮಳೆಗಾಲ ಇರುವುದರಿಂದ ವಿದ್ಯುತ್ ಕಂಬದ ವೈರುಗಳು ಹಸಿ ಮರಗಳಿಗೆ ತಗುಲಿ ಶಾರ್ಟ್ ಸರ್ಕೀಟ್ ಆಗುವ ಸಾಧ್ಯತೆಗಳಿವೆ.

ಹಾಗಾಗಿ ಅವಘಡ ಸಂಭವಿಸುವುದಕ್ಕೂ ಮುನ್ನವೇ ಸಂಬಂಧಪಟ್ಟ ಅಧಿಕಾರಿಗಳು ಎಚ್ಚರ ವಹಿಸಿ ಸರಿಪಡಿಬೇಕು.

**ಜೀವನ್ ಎಸ್.,** ಚಾಮರಾಜಮೊಹಲ್ಲಾ



### ಗಬ್ಬುನಾರುತ್ತಿದೆ ಶೌಚಾಲಯ

ಮಾನಸಗಂಗೋತ್ರಿಯ ಬ್ಲಾಕ್-1 ವಿದ್ಯಾರ್ಥಿನಿಲಯದ ಹಿಂಭಾಗದಲ್ಲಿರುವ ಶೌಚಾಲಯ ಅಶುಚಿತ್ವದಿಂದ ಕೂಡಿದೆ. ಶೌಚಾಲಯದ ಕಿಟಕಿ ಬಾಗಿಲುಗಳು ಮುರಿದಿದ್ದು ದುರಸ್ತಿಯಾಗದೇ ಗಬ್ಬುನಾರುತಿದೆ.

ಇದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದರೂ, ಅನಿವಾರ್ಯದಿಂದ ಅದೇ ಶೌಚಾಲಯ ಬಳಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಇದು ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

**ಅಭಿಷೇಕ್ ಪಾಳ್ಯ,** ವಿದ್ಯಾರ್ಥಿ



# ಬೇಸಿಗೆ ಶಿಬಿರವೋ, ಮನೆಪಾಠವೋ...

**ಡಾ. ಎಚ್.ಎಂ. ಕುಮಾರಸ್ವಾಮಿ**

ಈ ಬೇಸಿಗೆಯ ಉರಿಬಿಸಿಲು ಚೆನ್ನಾಗಿಯೇ ನೀರು ಕುಡಿಸುತ್ತದೆ. ನಾಮಕಾವಾಸ್ತೆ ಒಂದೆರಡು ಮಳೆ ಬಿದ್ದ ಮೇಲಂತೂ ಧಗೆ-ಕಾವು ಏರುತ್ತ ಸಾಕಪ್ಪಾ.. ಎನಿಸುವಂತಾಗಿದೆ.

ಬೆಳಗಿನ ವಾಯು ವಿಹಾರ ಏಳು ಗಂಟೆಯ ಹೊತ್ತಿಗೆಲ್ಲ ಮುಗಿದರೆ ಚೆನ್ನ. ತಡವಾದರೆ ಎಳೆ ಬಿಸಿಲಿಗೇ ಬಸವಳಿಯುತ್ತ ಮನೆ ಸೇರಬೇಕಾಗುತ್ತದೆ. ಹಾಗಾಗಿಯೇ ನಾನು ಮಾಮೂಲಿಗಿಂತ ಕೊಂಚ ಬೇಗನೇ ಹೊರಟು ಬಿಸಿಲೇರುವ ಒಳಗೆ ಮನೆ ಸೇರಿಕೊಳ್ಳುವ ತವಕದಿಂದ ಬಿರಬಿರನೆ ಹೆಜ್ಜೆ ಹಾಕುತ್ತ ನಮ್ಮ ಯಥಾ ಪ್ರಕಾರದ ಹರಟೆ ಕಟ್ಟೆಗೆ ಬಂದು ಕ್ಷಣ ಹೊತ್ತು ದಣಿವಾರಿಸಿಕೊಳ್ಳಲು ಕುಳಿತುಕೊಂಡೆ. ಇತ್ತೀಚಿಗೆ ನಮ್ಮ ವಿಹಾರದ ಮಾಮೂಲಿಗರು ಅಲ್ಲಿ ಸಿಗುವುದು ಅಪರೂಪವಾಗಿಬಿಟ್ಟಿದೆ. ಬಹುಶಃ ಅವರಿಗೂ ಎಳೆ ಬಿಸಿಲಿನ ಖಾರ ತಟ್ಟುವ ಭಯ ಆವರಿಸಿರಬಹುದು. ಆ ಬಗ್ಗೆ ತಕರಾರು ಇಲ್ಲ... ಇರಲಿ.

ನಾನು ಕಟ್ಟೆ ತಲುಪುವ ಮೊದಲೇ ಒಂದಿಬ್ಬರು ಮಹಿಳೆಯರು ಅದರ ಎದುರಿನಲ್ಲಿ ನಿಂತಿದ್ದರು. ಬಹುಶಃ ಬಸ್ಸಿಗಾಗಿ ಕಾಯುತ್ತಿದ್ದರು ಅನ್ನಿಸುತ್ತೆ. ಆಗ ಅವರ ನಡುವೆ ನಡೆಯುತ್ತಿದ್ದ ಸಂಭಾಷಣೆ ನನ್ನ ಕಿವಿಗೆ ಬಿದ್ದದ್ದು ಇಷ್ಟು:

ಒಬ್ಬರು: ನಿಮ್ಮ ಇಬ್ಬರು ಮಕ್ಕಳನ್ನು ಅದ್ಯಾವುದೋ ಸಮ್ಮರ್ ಕ್ಯಾಂಪ್ಗೆ ಸೇರಿಸಿದ್ದೀರಂತೆ?

ಇನ್ನೊಬ್ಬರು: ಹಾಂ. ನಮ್ಮ ಮನೆಗೆ ಸಮೀಪದಲ್ಲೇ ಕೆಲವರು ಸೇರಿಕೊಂಡು ಈ ವರ್ಷ 'ಬೇಸಿಗೆ ಶಿಬಿರ' ಆರಂಭಿಸಿದ್ದಾರೆ. ಮಕ್ಕಳನ್ನು ಕಳುಹಿಸಿ ಎಂದು ಒತ್ತಾಯಿಸಿದರು. ನಾಮಿನಲ್ ಫೀಸು. ಇಪತ್ತು ದಿನ. ಮಗಳು ಮೂರಕ್ಕೆ, ಮಗ ಐದನೇ ಕ್ಲಾಸಿಗೆ ಹೋಗಬೇಕು. ಇಪತ್ತು ದಿನ ಅಲ್ಲಿರಲಿ ಮನೇಲಿ ಗಲಾಟೆಯಾದ್ರೂ ಕಡಿಮೆ ಆಗುತ್ತೆ ಅಂತ ಕಳುಹಿಸಿದ್ವಿ.

ಒಬ್ಬರು: ಅಲ್ಲೇನು ಕಲಿಸ್ತಾರಂತೆ?

ಇನ್ನೊಬ್ಬರು: ಅಲ್ಲಿ ಹಾಡು, ಡಾನ್ಸ್, ಪೇಂಟಿಂಗ್, ನಾಟಕ... ಹೀಗೆ ಸುಮಾರು ಚಟುವಟಿಕೆ ಹೇಳಿಕೊಡ್ತಾರಂತೆ. ಸಂಜೆ ಮನೆಗೆ ಬಂದು ಖುಷಿಯಿಂದ ಹೇಳುತ್ವೆ.

ಒಬ್ಬರು: ಇರಬಹುದು. ಅದರೆ ನೀವು ಅವರನ್ನು ಅಡ್ವಾನ್ಸ್ ಟ್ಯೂಷನ್‌ಗೆ ಹಾಕಿದ್ರೆ ಚೆನ್ನಾಗಿರುತ್ತೇನೋ...! ನನ್ನ ಮಗನನ್ನು ನಾನು ಹಾಗೇ ಮಾಡಿದ್ದು . ಈಗ ಅವನು 9ನೇ ತರಗತಿಗೆ ಹೋಗಬೇಕು. ಆಮೇಲೆ ಈ ನಾಟಕ, ಡಾನ್ಸ್, ಪೇಂಟಿಂಗ್...ಬೇಕಿದ್ರೆ ಅವರೇ ಕಲಿತುಕೊಳ್ತಾರೆ.



ಸಾಂದರ್ಭಿಕ ಚಿತ್ರ

ಹೀಗೆ ಸಾಗಿತ್ತು ಅವರ ಮಾತುಕತೆ. ನನ್ನ ಸಮಯ ಮೀರುತ್ತ ಬಿಸಿಲು ಏರುತ್ತಿರುವುದನ್ನು ಮನಗಂಡ ನಾನು ಅಲ್ಲಿಂದ ಮನೆ ಕಡೆ ಹೊರಟೆ. ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿರುವ ನನಗೆ ಆ ಮಹಿಳೆಯರ ಸಂಭಾಷಣೆ (ನನ್ನ ಕಿವಿಗೆ ಬಿದ್ದಷ್ಟು) ನನ್ನನ್ನು ಆ ಕುರಿತಂತೆ ಯೋಚಿಸುವಂತೆ ಮಾಡಿತು.

ವರ್ತಮಾನದ ಇಂದಿನ ಸಂದರ್ಭದಲ್ಲಿ ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆ, ಪರಿವರ್ತನೆ ಹಾಗೂ ಶಿಕ್ಷಣ ಕ್ಷೇತ್ರ ನಿತ್ಯ ಪಡೆದುಕೊಳ್ಳುತ್ತಿರುವ ಹೊಸ-ವಿನೂತನ ಹೊರಳುಗಳ ಈ ಹೊತ್ತಿನಲ್ಲಿ ನಾನು ಕೇಳಿಸಿಕೊಂಡ ಮಹಿಳೆಯರ ಈ ಸಂಭಾಷಣೆ ಸದ್ಯದ ಪರಿಸ್ಥಿತಿಯಲ್ಲಿ ಅರ್ಥಪೂರ್ಣ ಹಾಗೂ ಸಾಂದರ್ಭಿಕವಾಗಿಯೇ ಇದೆ ಎಂಬುದರಲ್ಲಿ ಸಂಶಯವೇ ಇಲ್ಲ ಹಾಗೂ ಸದ್ಯದ ಜರೂರಾದ ಆಲೋಚನೆ ಕೂಡ.

ಪ್ರಸ್ತುತ, ನಗರ ಹಾಗೂ ಗ್ರಾಮೀಣ ಪ್ರದೇಶ ಎಂಬ ಭೇದವಿಲ್ಲದೆ ನಮ್ಮ ಪುಟಾಣಿ ಸಮೂಹ ಹಾಗೂ ಯುವ ಸಮೂಹವನ್ನು ನೂರಕ್ಕೆ ನೂರರಷ್ಟು ಪಠ್ಯಚಟುವಟಿಕೆಗೇ ಸೀಮಿತಗೊಳಿಸುವ ವಾತಾವರಣ ನಿರ್ಮಾಣವಾಗಿಬಿಟ್ಟಿದೆ. ಜ್ಞಾನ ಸಂಪಾದನೆಯೇ ಮುಖ್ಯವಾಗಿರುವ ಇಂದು, ಸಮಾಜವು ವಿದ್ಯಾರ್ಥಿಗಳ ಅಂಕ ಗ್ರೇಡ್ ಇತ್ಯಾದಿಯನ್ನೇ ಪರಿಗಣಿಸುವ ಸ್ಥಿತಿಗೆ ತಲುಪಿದೆ. ಹಾಗಾಗಿ ಕಲೆ, ಸಾಹಿತ್ಯ, ಸಂಗೀತ ಇತ್ಯಾದಿ ಪಠ್ಯೇತರ ಚಟುವಟಿಕೆಗಳು ಮಕ್ಕಳ ಪಠ್ಯಾಭ್ಯಾಸಕ್ಕೆ ತೊಡಕು ಉಂಟು ಮಾಡುವ ಪ್ರಕ್ರಿಯೆಗಳು ಎಂಬುದು ಪೋಷಕರ ಅನಿಸಿಕೆ-ವಾದ ಹಾಗೂ ನಂಬಿಕೆ ಕೂಡ.

ಹಾಗೆಂದು ಮಕ್ಕಳು ರಜಾ ಕಾಲದಲ್ಲಿ ಮೇಲೆ ತಿಳಿಸಿದ ಬೇಸಿಗೆ ಶಿಬಿರ, ಕ್ಯಾಂಪ್‌ಗಳು ನಡೆಯುತ್ತಿಲ್ಲವೆಂದಲ್ಲ . ರಾಜ್ಯದಾದ್ಯಂತ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಲ್ಲಿನ ವಾತಾವರಣ, ಸೌಲಭ್ಯಕ್ಕೆ ಅನುಸಾರವಾಗಿ ಇಂತಹ ಶಿಬಿರಗಳು ನಡೆಯುತ್ತಿವೆ. ಸಾಹಿತ್ಯ, ಕಲೆ ಮುಂತಾದವುಗಳ ಬಗ್ಗೆ ಆಸಕ್ತಿ ಇರುವ, ಅರ್ಥ ತಿಳಿದಿರುವ ಪೋಷಕರು ತಮ್ಮ ಮಕ್ಕಳನ್ನು ಕಳುಹಿಸುತ್ತಾರೆ. ಇದರಿಂದ ಮಕ್ಕಳ ಮನಸ್ಸಿಗೆ ಮುದ ದೊರೆತು ವಿಭಿನ್ನ ಅನುಭವಗಳಿಗೆ ಅವರ ಮನ-ಮೈಗಳು ತೆರೆದುಕೊಳ್ಳುತ್ತವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಎಲ್ಲವೂ ಜ್ಞಾನದ ಶಿಬಿರಗಳೇ ಆಗಿವೆ.

ಇಲ್ಲಿ ನಾವು ನಮ್ಮ ಬಾಲ್ಯದ ದಿನಗಳನ್ನು, ಶೈಕ್ಷಣಿಕ ವಾತಾವರಣವನ್ನು ಒಂದು ಕ್ಷಣ ನೆನಪಿಸಿಕೊಳ್ಳಬೇಕು. ನಾವು ಚಿಕ್ಕವರಿದ್ದಾಗ ನಮ್ಮ ಶಾಲಾ ದಿನಗಳು ಪಠ್ಯಕ್ಕಿಂತಲೂ ಆಟೋಟ ಮನೆಗೆಲಸ ಇತ್ಯಾದಿಗಳಲ್ಲಿಯೇ ಹೆಚ್ಚಾಗಿ ಮುಗಿಯುತ್ತಿದ್ದವು.

ಯಾವುದಕ್ಕೂ ಒತ್ತಾಯವಿರುತ್ತಿರಲಿಲ್ಲ. ಆಟೋಟಕ್ಕೆ ವಿಸ್ತಾರವಾದ ಮೈದಾನಗಳಿರುತ್ತಿದ್ದವು. 'ಆಡಿದ್ದೇ ಆಟ-ಹೂಡಿದ್ದೆ ಲಗ್ಗೆ' ಎಂಬ ಹಳ್ಳಿ ಮಾತಿನಂತೆಯೇ ಯಾವ ನಿರ್ಬಂಧವೂ ಇರುತ್ತಿರಲಿಲ್ಲ. ಆದರೆ ಇಂದು ನಗರ ಪ್ರದೇಶಗಳ ಬಹುತೇಕ ಶಾಲೆಗಳು ಕಿಷ್ಕಿಂಧೆಯಂತಾಗಿ ಆಟದ ಮೈದಾನದ ಪರಿಚಯವೇ ಇಲ್ಲದಂತಾಗಿದೆ. ಹಾಗಾಗಿ ನಗರ ಪ್ರದೇಶದ ಮಕ್ಕಳಿಗೆ ಬಹುತೇಕ ಬಡಾವಣೆ ರಸ್ತೆಗಳೇ ಆಟದ ಮೈದಾನಗಳಾಗಿ ಬಿಟ್ಟಿದೆ.

ಇದೆಲ್ಲಾ ಇರಲಿ ಎಲ್ಲ ಕಡೆಯೂ ಇದ್ದದ್ದೇ. ಆದರೆ ಮೇಲಿನ ಮಹಿಳೆಯರ ಸಂಭಾಷಣೆಯಲ್ಲಿ ಒಬ್ಬ ಮಹಿಳೆಯ ಅಭಿಪ್ರಾಯ ಸದ್ಯದ ಶೈಕ್ಷಣಿಕ ವಾತಾವರಣಕ್ಕೆ ಪೂರಕವಾಗಿದೆ ಎನ್ನಬಹುದಾದರೂ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಪಠ್ಯೇತರ ಚಟುವಟಿಕೆಯನ್ನೂ ಪೂರಕ ಎಂದು ಪರಿಗಣಿಸದೆ ನಿರಾಕರಿಸುವ ಅಭಿಪ್ರಾಯ ಮೂಡಿಸುತ್ತದೆ. ಬೇಸಿಗೆ ಶಿಬಿರ, ಕ್ಯಾಂಪ್‌ಗಳೇ ಆಗಲಿ, ಮನೆ ಹಾಗೂ ಶಾಲೆಯೊಳಗಿನ ಸಾಹಿತ್ಯ- ಸಾಂಸ್ಕೃತಿಕ ವಾತಾವರಣ ಮಕ್ಕಳ ಮನೋವಿಕಾಸಕ್ಕೆ ಅಡಿಪಾಯ ಒದಗಿಸುತ್ತದೆ. ಪ್ರಪಂಚದ ಯಾವುದೇ ಮೂಲೆಯ ಸಾಹಿತಿಗಳಾಗಲಿ, ಸಂಗೀತಗಾರರಾಗಲಿ, ವಿಜ್ಞಾನಿಗಳೇ ಆಗಿರಲಿ ಎಲ್ಲರೂ ಇಂತಹ ವಾತಾವರಣದಿಂದಲೇ ಬೆಳೆದು ಬಂದು ಲೋಕೋತ್ತರ ವ್ಯಕ್ತಿತ್ವ ರೂಪಿಸಿಕೊಂಡವರಾಗಿದ್ದಾರೆ . ಆದುದರಿಂದಲೇ ನಮ್ಮ ಹಿರಿಯರು ಜ್ಞಾನಾರ್ಜನೆಗೆ, ಅರಿವಿಗೆ, ಕಲೆಗಳ ಒತ್ತಾಸೆಯೂ ಇರಬೇಕೆಂಬ ಕಾರಣದಿಂದಲೇ 'ಅರಿವಿಂಗೆ ಕಲೆಗಳಲಂಕರಣ' ಎಂದಿದ್ದಾರೆ. ಯಾವುದೇ ಪ್ರಕಾರದ, ಕಲೆ ಸಾಹಿತ್ಯ, ಎಲ್ಲವೂ ಜ್ಞಾನಕ್ಕೆ ಪೂರಕ... ನೀವೇನಂತೀರಿ...!

# ಫೇಲಾದವರ ಆಶಾಕಿರಣ ಜ್ಞಾನವರ್ಧಿನಿ

**ಮೈಸೂರಿನ** ಸೀತಾವಿಲಾಸ ರಸ್ತೆಯಲ್ಲಿರುವ 'ಜ್ಞಾನವರ್ಧಿನಿ ಸ್ಟಡಿ ಸೆಂಟರ್' ಫೇಲಾದವರಿಗೆ ಆಶಾಕಿರಣವಾಗಿದೆ. ಏಕೆಂದರೆ, ಈ ಸಂಸ್ಥೆಯು ದಶಕಗಳಿಂದಲೂ ಪ್ರಥಮ ಪಿಯು ಪರೀಕ್ಷೆ ಫೇಲಾದ ವಿದ್ಯಾರ್ಥಿಗಳಿಗೆ ನೇರವಾಗಿ ದ್ವಿತೀಯ ಪಿಯು ಪರೀಕ್ಷೆಗೆ ಕೂರಲು ಅವಕಾಶ ಕಲ್ಪಿಸುವುದರ ಮೂಲಕ ಫೇಲಾದ ವಿದ್ಯಾರ್ಥಿಗಳಿಗೆ ವರದಾನವಾಗಿದೆ.

ಪ್ರಥಮ ಪಿಯು ಪರೀಕ್ಷೆ ಫೇಲಾಗುವ ವಿದ್ಯಾರ್ಥಿಗಳಿಗೆ ಮುಂದೇನು ಎನ್ನುವ ಆತಂಕ ಸಹಜ. ಹಲವು ವಿದ್ಯಾರ್ಥಿಗಳು ತಮ್ಮ ಭವಿಷ್ಯವೇ ಮುಗಿಯಿತು ಎಂದುಕೊಳ್ಳುತ್ತಾರೆ. ಹಲವರಿಗೆ ಮತ್ತೊಂದು ವರ್ಷ ಪ್ರಥಮ ಪಿಯು ಓದಬೇಕಲ್ಲ ಎಂಬ ಸಂಕಟ ಕಾಡುತ್ತದೆ. ಪ್ರಥಮ ಪಿಯು ಪಾಸಾದ ಸಹಪಾಠಿಗಳು ಖುಷಿಯಿಂದ ದ್ವಿತೀಯ ಪಿಯು ತರಗತಿಗೆ ಹೋಗುತ್ತಿರುವಾಗ ತಾವು ಮತ್ತೆ ಪ್ರಥಮ ಪಿಯು ಓದಬೇಕೆಂಬ ಕೀಳರಿಮೆ ಆವರಿಸುತ್ತದೆ. ಈ ರೀತಿಯ ಮನಃಸ್ಥಿತಿಯಿಂದ ಕುಗ್ಗಿರುವ ವಿದ್ಯಾರ್ಥಿಗಳಿಗೆ 'ಜ್ಞಾನವರ್ಧಿನಿ ಸ್ಟಡಿ ಸೆಂಟರ್' ಕೈದೀವಿಗೆಯಾಗಿದೆ.

ಜ್ಞಾನವರ್ಧಿನಿ ಸಂಸ್ಥೆಯಲ್ಲಿ ಪ್ರಥಮ ಪಿಯು, ಡಿಪ್ಲೊಮಾ ಮತ್ತು ಐಟಿಐ ಫೇಲಾದ ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯುಗೆ ಪ್ರವೇಶ ನೀಡಿ, ನುರಿತ ಶಿಕ್ಷಕರಿಂದ ಪರಿಣಾಮಕಾರಿ ಬೋಧನೆ ನೀಡಲಾಗುತ್ತದೆ. ವಿದ್ಯಾರ್ಥಿಗಳು ಎಲ್ಲ ರೀತಿಯ ಕಲಿಕೆಯ ಸಮಸ್ಯೆಗಳು ಮತ್ತು ಸಂದೇಹಗಳನ್ನು ನಿವಾರಿಸಿ, ಅಧ್ಯಯನ, ನೆನಪಿನ ಶಕ್ತಿ, ಪರೀಕ್ಷಾಕಲೆ ಹಾಗೂ ಬರವಣಿಗೆ ಕಲೆಗಳನ್ನು ಕಲಿಸಿ, ಮುದ್ರಿತ ಪಠ್ಯ, ಆಡಿಯೊ ಹಾಗೂ ವಿಡಿಯೊ



'ಜ್ಞಾನವರ್ಧಿನಿ ಸ್ಟಡಿ ಸೆಂಟರ್'ನ ವಿದ್ಯಾರ್ಥಿ ಹಾಗೂ ಬೋಧಕ ಬಳಗ

ನೋಟ್ಸ್ ನೀಡಿ ಪ್ರೋತ್ಸಾಹಿಸಲಾಗುತ್ತದೆ. ಪಾಠಗಳ ಪುನರಾವರ್ತನೆ ಮಾಡಿ, ಪಾಕ್ಷಿಕ ಪರೀಕ್ಷೆಗಳನ್ನು ನಡೆಸಿ, ವಿದ್ಯಾರ್ಥಿಗಳನ್ನು ದ್ವಿತೀಯ ಪಿಯು ಪರೀಕ್ಷೆಗೆ ಅಣಿಗೊಳಿಸಲಾಗುತ್ತದೆ.

ಇಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಗೊಳಿಸುವ ರೀತಿ ವೈಜ್ಞಾನಿಕವಾಗಿದೆ. ಏಕೆಂದರೆ ಪ್ರಥಮ ಪಿಯು ಪರೀಕ್ಷೆಯಲ್ಲಿ ಐದಾರು ವಿಷಯಗಳಲ್ಲಿ ಫೇಲಾದ ವಿದ್ಯಾರ್ಥಿಗಳೂ ಸಹ, ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹಲವು ವಿಷಯಗಳಲ್ಲಿ ನೂರಕ್ಕೆ ನೂರು ಅಂಕಗಳನ್ನು ಗಳಿಸಿ ಉನ್ನತ ದರ್ಜೆಯಲ್ಲಿ ಪಾಸಾಗಿದ್ದಾರೆ. ಈ ಸಾಲಿನಲ್ಲೂ ಸಹ ಆದಿತ್ಯ ಎಂಬ ವಿದ್ಯಾರ್ಥಿ ಅಕೌಂಟನ್ಸಿ ವಿಷಯದಲ್ಲಿ ನೂರಕ್ಕೆ ನೂರು ಅಂಕ ಗಳಿಸಿ ಸಾಧನೆಯ ಶಿಖರ ಏರಿದ್ದಾರೆ.

ಇವರಿಗೆ ₹ 10 ಸಾವಿರ ನಗದು ಬಹುಮಾನ ಸಿಕ್ಕಿದೆ. ನೂರಕ್ಕೆ ನೂರು ಅಂಕ ಗಳಿಸಿದ ಈ ವಿದ್ಯಾರ್ಥಿ ಮೊದಲ ಪಿಯುವಿನಲ್ಲಿ ವಾಣಿಜ್ಯ ವಿಷಯ ಓದಿರಲ್ಲ. ಆದರೂ, ದ್ವಿತೀಯ ಪಿಯು ಪರೀಕ್ಷೆಯಲ್ಲಿ ನೂರಕ್ಕೆ ನೂರು ಅಂಕ ಗಳಿಸಿ ಸಾಧನೆ ಮಾಡಿದ್ದಾರೆ.

ಈ ಸಂಸ್ಥೆ ಪ್ರಾಂಶುಪಾಲ ಶಿಕ್ಷಣತಜ್ಞ ಹಾಗೂ ವ್ಯಕ್ತಿತ್ವವಿಕಸನ ತರಬೇತುದಾರರಾದ ಡಾ.ಪ್ರಸನ್ನ ಹೆಗಡೆ. ಇವರು ದ್ವಿತೀಯ ಪಿಯು ಅಕೌಂಟೆನ್ಸಿ ಪುಸ್ತಕ ಹಾಗೂ ಬ್ಯುಸಿನೆಸ್ ಸ್ಟಡೀಸ್ ಪುಸ್ತಕಗಳ ಲೇಖಕರು. 2016ರ ಸಾಲಿನ ರಾಜ್ಯಮಟ್ಟದ ಶ್ರೇಷ್ಠ ಉಪನ್ಯಾಸಕ ಪ್ರಶಸ್ತಿ ವಿಜೇತರೂ ಹೌದು.

ಇವರ ಅಧ್ಯಯನ ಕೌಶಲ ತರಬೇತಿಯು ರಾಜ್ಯದಾದ್ಯಂತ ಪ್ರಸಿದ್ಧವಾಗಿದೆ. ಇವರ ಅಧ್ಯಯನ ಕೌಶಲ ತರಬೇತಿಯನ್ನು ರಾಜ್ಯದ ಹಲವಾರು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಂಡಿದ್ದು ಉತ್ತಮ ಫಲಿತಾಂಶವನ್ನು ಪಡೆಯುತ್ತಿವೆ.

'ಜ್ಞಾನವರ್ಧಿನಿ ಸ್ಟಡಿ ಸೆಂಟರ್'ನಲ್ಲಿ 2019-20ನೇ ಸಾಲಿನ ದ್ವಿತೀಯ ಪಿಯು ತರಗತಿಗಳಿಗೆ ಪ್ರವೇಶಾತಿ ಪ್ರಾರಂಭವಾಗಿದೆ. ಮೊದಲ ಪಿಯುಸಿ, ಡಿಪ್ಲೊಮಾ ಹಾಗೂ ಐಟಿಐ ಫೇಲಾದ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದು. ಪಿ.ಜಿ ಸೌಲಭ್ಯವೂ ಲಭ್ಯವಿದೆ. ಉತ್ತಮ ಕೋಚಿಂಗ್ ಜತೆ ವೈಯಕ್ತಿಕ ಗಮನವನ್ನೂ ಕೊಡಲಾಗುತ್ತಿದೆ. ಆಸಕ್ತರು ಸಂಸ್ಥೆಯನ್ನು ಸಂಪರ್ಕಿಸಿ ಉಚಿತವಾಗಿ ಹೆಚ್ಚಿನ ಮಾಹಿತಿ ಪಡೆಯಬಹುದು.

**ಸಂಸ್ಥೆಯ ವಿಳಾಸ:** 'ಜ್ಞಾನವರ್ಧಿನಿ ಸ್ಟಡಿ ಸೆಂಟರ್', ನಂಬರ್ 8/1, ಸೀತಾವಿಲಾಸ ರಸ್ತೆ, ಮರಿಮಲ್ಲಪ್ಪ ಕಾಲೇಜಿನ ಎದುರು, ಚಾಮರಾಜ ಮೊಹಲ್ಲಾ, ಮೈಸೂರು 570024. ಮೊಬೈಲ್: 9844355941, 9482674031 ಸಂಪರ್ಕಿಸಬಹುದು.

## ಮುನ್ನೋಟ

### ಬ್ರಹ್ಮ ರಥೋತ್ಸವ

ಗೋಕುಲಂ 3ನೇ ಹಂತದಲ್ಲಿರುವ ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀಕೃಷ್ಣ ದೇವಾಲಯದ 28ನೇ ವಾರ್ಷಿಕೋತ್ಸವ ಅಂಗವಾಗಿ ವಿವಿಧ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಂಡಿದೆ.

ಮಂಗಳವಾರ (ಮೇ 14) ಬೆಳಿಗ್ಗೆ 6ಕ್ಕೆ ರಥಾಂಗ ಹೋಮ, ರಥಸ್ನಪನ, ಯಾತ್ರಾದಾನ, ಮಂಟಪೋತ್ಸವ ನಡೆಯಲಿದ್ದು, 7.15ಕ್ಕೆ ದಿವ್ಯ ರಥಾರೋಹಣ, ಸಂಜೆ 6ಕ್ಕೆ ಚತುಸ್ಥಾನಾರ್ಚನೆ-ನಿತ್ಯಹೋಮ ಹಾಗೂ ಶಾಂತ್ಯುತ್ಸವ ನಡೆಯಲಿದೆ.

ಬುಧವಾರ (ಮೇ 15) ಬೆಳಿಗ್ಗೆ 9 ಗಂಟೆಗೆ ಚತುಸ್ಥಾನಾರ್ಚನೆ, ಅಷ್ಟಲಕ್ಷ್ಮಿ ಹೋಮ, ಡೋಲೋತ್ಸವ ಹಾಗೂ ಸಂಜೆ 6ಕ್ಕೆ ರಾಮತಾರಕ ಹೋಮ, ಪಂಚಮುಖಿ ಹನುಮಾನ್ ಮಂತ್ರಹೋಮ, ಹನುಮಂತೋತ್ಸವ ನಡೆಯಲಿದೆ.

ಗುರುವಾರ (ಮೇ16) ಬೆಳಿಗ್ಗೆ 9ಗಂಟೆಗೆ ಪ್ರಾಕಾರೋತ್ಸವ ಹಾಗೂ ಸಂಜೆ 6ಕ್ಕೆ ಶಾಂತಿಹೋಮ, ಮಹಾಪೂರ್ಣಾಹುತಿ, ಧ್ವಜಾರೋಹಣ, ಪುಷ್ಪಯಾಗ ಸೇರಿದಂತೆ ವಿವಿಧ ಪೂಜಾ ವಿಧಾನಗಳು ಜರುಗಲಿವೆ.

ಶುಕ್ರವಾರ (ಮೇ17) ಬೆಳಿಗ್ಗೆ 9 ಗಂಟೆಗೆ ಅವಭೃತಸ್ನಾನ (ಚಕ್ರಸ್ನಾನ), ಅಮೃತ ಕಳಸಾಭಿಷೇಕ ನಡೆಯಲಿದೆ.

ಸಂಜೆ 6.30ಕ್ಕೆ ವಿದ್ವಾನ್ ಶ್ರೀನಾಥ್ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಸಂಜೆ 8ಕ್ಕೆ ವೈಭವ ಶಯನೋತ್ಸವ ಜರುಗಲಿದೆ.

# ಕ್ಷೌರ ಕರ್ಮವೂ ಒಂದು ಸಂಸ್ಕಾರವೇ?

**ತಾರೋಡಿ ಸುರೇಶ**

**ಚೂಡಾ** ಕರ್ಮವು ಈ ಸಂಸ್ಕಾರದ ಶಾಸ್ತ್ರೀಯವಾದ ನಾಮಧೇಯ. ಇದನ್ನು ರೂಢಿಯಲ್ಲಿ ಚೌಲ ಎಂದೂ ಕರೆಯುತ್ತಾರೆ. ಎಲ್ಲ ಗೃಹ್ಯ-ಧರ್ಮ ಸೂತ್ರಕಾರರು ಮಾನ್ಯ ಮಾಡಿದ್ದಾರೆ. ಚೂಡಾ ಎಂದರೆ ಶಿಖೆ ಎಂದರ್ಥ. ಮೊಟ್ಟಮೊದಲನೆಯ ಶಿಖೆಯನ್ನು ಇಡಿಸುವ ಕರ್ಮವಾಗಿರುವುದರಿಂದ ಮಹತ್ವವುಳ್ಳದ್ದಾಗಿದೆ.

ಆಧುನಿಕರು ಸೌಕರ್ಯ ಮತ್ತು ಸೌಂದರ್ಯಕ್ಕಾಗಿ ಬಂದ ಪದ್ಧತಿ ಎನ್ನುತ್ತಾರೆ. ಕೇಶವು ಹೆಚ್ಚಿದ್ದರೆ ಹೇನುಗಳು ಮತ್ತು ಇತರೆ ಕೊಳೆ ಮಲಿನಗೊಳಿಸುವದರಿಂದ ಕೂದಲು ಕತ್ತರಿಸುವುದು ಸೌಕರ್ಯ. ತಲೆ ಭಾರ ಕಡಿಮೆ ಮಾಡುವುದರಿಂದ ಸೌಕರ್ಯ. ನರಬಲಿಗೆ ಪರ್ಯಾಯ. ಕ್ರಮೇಣ ಮಂತ್ರ ಇತ್ಯಾದಿಯನ್ನು ಭಯದ ಕಾರಣದಿಂದ ಸೇರಿಸಿ ಧಾರ್ಮಿಕ ರೂಪ ಕೊಟ್ಟರು ಎಂದು ಅಭಿಪ್ರಾಯಪಡುತ್ತಾರೆ.

ಋಷಿಗಳು ಸೌಂದರ್ಯವನ್ನು, ಸೌಕರ್ಯವನ್ನು ತಿರಸ್ಕರಿಸಿಲ್ಲ. ಅಷ್ಟೆ ಆದರೆ ಅದನ್ನು ಸಂಸ್ಕಾರವೆಂದು ಕರೆದು ಇಷ್ಟು ಮಹತ್ವವನ್ನು ಕೊಡಬೇಕಾಗಿರಲಿಲ್ಲ. ಕೇವಲ ಲೌಕಿಕ ಸಂಸ್ಕಾರವೇ ಸಾಕಾಗುತ್ತಿತ್ತು. ನಾವು ಹಿಂದಿನ ಸಂಸ್ಕಾರಗಳಲ್ಲಿ ಗಮನಿಸಿರುವಂತೆ ದೀರ್ಘಾಯಸ್ಸು, ಸಾತ್ವಿಕವಾದ ಕೀರ್ತಿ ಮತ್ತು ಮಾಂಗಲ್ಯಕ್ಕೋಸ್ಕರ ಮಾಡಬೇಕು ಎಂದು ಸ್ಪಷ್ಟವಾಗಿಯೇ ಹೇಳಿದ್ದಾರೆ. ಮಂತ್ರಗಳ ಅಭಿಪ್ರಾಯವೂ ಇದನ್ನೇ ಹೇಳುತ್ತವೆ.

ಕ್ಷೌರದ ಅಂಗಡಿಯನ್ನು ನಮ್ಮ ದೇಶದಲ್ಲಿ 'ಆಯುಷ್ಕರ್ಮ ಶಾಲಾ' ಎಂದೂ, ಕೂದಲು ಕತ್ತರಿಸುವುದನ್ನು 'ಆಯುಷ್ಕರ್ಮ'ವೆಂದೂ ಕರೆಯುತ್ತಿದ್ದರು. 'ಇದು ದೀರ್ಘಾಯಸ್ಸು ಮತ್ತು ಶುದ್ಧಿಯನ್ನು ಉಂಟು ಮಾಡುವ ಕರ್ಮ' ಎಂದು ಶ್ರೀರಂಗ ಮಹಾಗುರುಗಳು, ಚಿಕ್ಕದಾಗಿ, ಚೊಕ್ಕವಾಗಿ ಒಂದೇ ವಾಕ್ಯದಲ್ಲಿ ಸಾರಸರ್ವಸ್ವವನ್ನೂ ಹೇಳಿದ್ದಾರೆ.

ಈ ಸಂಸ್ಕಾರದ ಸಾಮಾನ್ಯವಾದ ಆಚರಣೆ ಹೀಗಿದೆ. ಮೂರನೆಯ ವರ್ಷದಲ್ಲಿ, ಪುನರ್ವಸು ನಕ್ಷತ್ರದಲ್ಲಿ ಅಥವಾ ಐದನೆಯ ವರ್ಷದಲ್ಲಿ ಮಾಡಬೇಕು. ಕೊನೇ ಪಕ್ಷ ಉಪನಯನದ ಜೊತೆಯಲ್ಲಿಯಾದರೂ ಮಾಡಲೇಬೇಕಾದ ಕರ್ಮವಿದು. ಶ್ರೀರಂಗಮಹಾಗುರುಗಳ ಮೂರನೆಯ ವರ್ಷ ಎಂದಿದ್ದರು. ಇದನ್ನು ವಿಷಮ ಸಂಖ್ಯೆಯ ವರ್ಷದಲ್ಲಿ ಮತ್ತು ಹಗಲಿನಲ್ಲಿಯೇ ಮಾಡಬೇಕು. ತಾಯಿಯು ಗರ್ಭವತಿಯಾಗಿದ್ದರೆ ಮಾಡಬಾರದು ಎಂದೂ ಶಾಸ್ತ್ರಗಳು ಎಚ್ಚರಿಸುತ್ತವೆ.

ತಣ್ಣೀರಿಗೆ ಬಿಸಿನೀರನ್ನು ಸೇರಿಸಿ ಅದಕ್ಕೆ ಬೆಣ್ಣೆ, ತುಪ್ಪ ಮತ್ತು ಮೊಸರನ್ನು ಬೆರೆಸಬೇಕು. ಕ್ಷೌರ ಮಾಡಬೇಕಾದ ಜಾಗಕ್ಕೆ ಈ ದ್ರವ್ಯವನ್ನು ಸವರಬೇಕು. ಶಲಲೀ ಔದುಂಬರ ಮತ್ತು ದರ್ಭೆಯನ್ನು ಸೇರಿಸಿ ಕೇಶವನ್ನು ಮೇಲಕ್ಕೆತ್ತಬೇಕು. ಮೊದಲು ತಂದೆಯು ಮೂರು ಕೂದಲನ್ನು ದರ್ಭೆಯೊಂದಿಗೆ ಹಿಡಿದು ನಾಲ್ಕು ದಿಕ್ಕುಗಳಲ್ಲಿಯೂ ಕತ್ತರಿಸಬೇಕು. ಉಳಿದ ಕೂದಲನ್ನು ನಾಪಿತನು ಕತ್ತರಿಸುತ್ತಾನೆ. ತಾಯಿಯು ಗೋಮಯವಿರುವ ಪಾತ್ರೆಯಲ್ಲಿ ಕತ್ತರಿಸಿದ ಕೂದಲನ್ನು ಸಂಗ್ರಹಿಸಿ ಅತ್ತಿ ಮರದ ಬುಡದಲ್ಲಿ ಹೂಳುತ್ತಾಳೆ ಅಥವಾ ಹಸುವಿನ ಕೊಟ್ಟಿಗೆಯಲ್ಲಿ ಹಾಕುವ ರೂಢಿಯೂ ಇದೆ. ನಂತರ ತಂದೆಯು ಸವಿತೃ ದೇವತೆಯನ್ನು ಧ್ಯಾನಿಸುತ್ತಾ ನಾಪಿತನನ್ನು ನೋಡುತ್ತಾನೆ. ಮಗುವಿಗೆ ಬಿಸಿನೀರಿನ ಸ್ನಾನ, ಅಲಂಕಾರ ಮಾಡಿ ದಕ್ಷಿಣದಲ್ಲಿ ಕುಳಿತಿರುವ ಬ್ರಹ್ಮನಿಗೆ ಗೋದಾನ ಕೊಡಬೇಕು. ಅನಂತರ ಬ್ರಹ್ಮೋದ್ವಾಸನ, ಅಗ್ನಿಯ ಉಪಸ್ಥಾನ, ಭೋಜನ ಮಾಡಿಸಿ ಆಶೀರ್ವಾದ ಪಡೆಯಬೇಕು. ಅನ್ಯಾನ್ಯ ಸಂಪ್ರದಾಯಗಳಲ್ಲಿ ಸಣ್ಣ-ಪುಟ್ಟ ವ್ಯತ್ಯಾಸಗಳು ಇದ್ದರೂ ಇವಿಷ್ಟೂ ಸ್ಥೂಲವಾದ ಕಲಾಪಗಳು. ಎಲ್ಲ ಘಟ್ಟಗಳಲ್ಲಿಯೂ ಸೂಕ್ತವಾದ ಮಂತ್ರ ಪ್ರಯೋಗವಿರುತ್ತದೆ.

ಆಯುರ್ವೇದವು ಚೂಡಾಕರ್ಮವು ಆಯುರ್ವೃದ್ಧಿ, ಪಾಪ ಪರಿಹಾರಕ, ಹರ್ಷಪ್ರದಾಯಕ, ಸೌಭಾಗ್ಯ ದಾಯಕ ಎಂದು ಪ್ರಶಂಸೆ ಪಡೆದಿದೆ. ಪೌಷ್ಟಿಕಂ ವೃಷ್ಯಂ ಆಯುಷ್ಯಂ ಶುಚಿರೂಪಂ ವಿರಾಜನಂ! ಕೇಶಶ್ಮಶ್ರುನಖಾದೀನಾಂ ಕರ್ತನಂ ಸಂಪ್ರಸಾದನಂ!

ಎಂದು ಚರಕಮುನಿಯು ಹೇಳುತ್ತಾನೆ. ಆತನ ಮಾತಿನಲ್ಲಿ ತಾತ್ವಿಕವಾದ ಅಂಶ, ಭೌತಿಕ ಆರೋಗ್ಯ, ಸೌಂದರ್ಯ, ಸೌಕರ್ಯಗಳೆಲ್ಲವೂ ಸೇರಿದೆ. ಅವುಗಳ ವಿವರಗಳನ್ನು ಮುಂದೆ ಗಮನಿಸೋಣ.

## ನೀವೂ ಕಳುಹಿಸಿ



'ಮೆಟ್ರೊ'ಗೆ ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...

ಇ ಮೇಲ್: mysoremetro@prajavani.co.in

ವಾಟ್ಸ್ಆ್ಯಪ್; 95133 22937

## ನಗೆಹನಿ

### ರಾಣಿ ತರಹ ನೋಡ್ಕೋತೀನಿ

**ಹೆಂಡತಿ:** ರೀ ನಿಮಗೆ ರಾಣಿ ಅನ್ನೋ ಮೊದಲನೇ ಹೆಂಡತಿ ಇರುವ ವಿಷಯ ಮದುವೆಗೆ ಮುಂಚೆ ನನಗ್ಯಾಕೆ ಹೇಳಲಿಲ್ಲ?.

**ಗುಂಡ:** ಹೇಳಿದ್ನಲ್ಲ ಚಿನ್ನ...

**ಹೆಂಡತಿ:** ರೀ ಸುಳ್ಳು ಹೇಳಬೇಡಿ, ಯಾವಾಗ ಹೇಳಿದ್ರಿ?

**ಗುಂಡ:** ನಿನ್ನ ರಾಣಿ ತರಹ ಚೆನ್ನಾಗಿ ನೋಡ್ಕೋತೀನಿ ಅಂತಹೇಳಿದ್ನಲ್ಲ.....

